ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ19-12-2025 ರಂದು ಬೋಧಿಸಲಾಯಿತು.

ಪಾಟೀ ಸವಾಲುಃ 5 ರಿಂದ 10 ನೇ ಪ್ರತಿವಾದಿ ಪರ ಶ್ರೀ ಎಂ ಆರ್ ಪಿ ವಕೀಲರಿಂದಃ

39. ಸಿದ್ದಾಪುರ ತಾಲುಕ ಬಿದ್ರಕಾನ ಗ್ರಾಮದ ಸರ್ವೆ ನಂ 245 ರಲ್ಲಿ ವಾದಿ ಮತ್ತು 5 ರಿಂದ 10 ನೇ ಪ್ರತಿವಾದಿಗೆ ಸಮಾನವಾದ ಹಕ್ಕು ಅಧಿಕಾರ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ಸಿದ್ದಾಪುರ ತಾಲುಕ ಬಿದ್ರಕಾನ ಗ್ರಾಮದ ಸರ್ವೆ ನಂ 245 ರ 2022-2023 ನೇ ಸಾಲಿನ ಪಹಣಿ ಪತ್ರಿಕೆ ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು. ನಿ.ಡಿ-1 ರ ಪ್ರಕಾರ ನಿ.ಡಿ-1 ರಲ್ಲಿ 9 ನೇ ಕಾಲಂ ನಲ್ಲಿ ವಾದಿ ಮತ್ತು 5 ರಿಂದ 10 ನೇ ಪ್ರತಿವಾದಿಗಳ ಜಂಟಿ ಖಾತೆಯಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಪ್ರತ್ಯೇಕವಾಗಿ ವೈವಾಟಿ ಮಾಡುತ್ತಿದ್ದೆವೆ ಎಂದುನುಡಿಯುತ್ತಾರೆ. ಕಂದಾಯ ದಾಖಲೆಗಳಲ್ಲಿ ನಿ.ಡಿ-1 ಕ್ಕೆ ಸಂಬಂದಿಸಿದಂತೆ ಪ್ರತ್ಯೇಕವಾಗಿ ಹಕ್ಕು ಬದಲಾವಣೆ ಆಗಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯ ಸರ್ವೆ ಕಂದಾಯ ಇಲಾಖೆಯಿಂದ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿ.ಡಿ-1 ರಲ್ಲಿ ತೋರಿಸಿರುವಂತೆ 6 ಗುಂಟೆ ಖರಾಬ ಸದರಿ ಸರ್ವೆ ನಂಬರ ನ ಯಾವ ಭಾಗಕ್ಕೆ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಸರ್ವೆ ನಂಬರ ಸರ್ವೆ ಆಗಿರುವುದಿಲ್ಲ ಎಂದು ಉತ್ತರಿಸುತ್ತಾರೆ.

40. ಸಿದ್ದಾಪುರ ತಾಲುಕ ಬಿದ್ರಕಾನ ಗ್ರಾಮದ ಸರ್ವೆ ನಂ 245 ರಲ್ಲಿ ನನಗೆ ಸೇರಿದ ಮನೆ ನಂ 24 ಮತ್ತು 5 ರಿಂದ 10 ನೇ ಪ್ರತಿವಾದಿಗಳಿಗೆ ಸೇರಿದ ಮನೆ ನಂ 25 ಒಂದು ಪೊಡ್ ನಲ್ಲಿ ಇದ್ದವು ಎಂದರೆ ಸರಿ. ಸದರಿ ಎರಡೂ ಮನೆಗಳು ಬಿದ್ರಕಾನ್ ಗ್ರಾಮ ಪಂಚಾಯತ ದಾಖಲೆಗಳಲ್ಲಿ ದಾಖಲಾಗಿರುತ್ತವೆ ಎಂದರೆ ಸರಿ. ಸದರಿ ಎರಡೂ ಮನೆಗಳಿಗೆ ಒಂದೇ ಸಾಮೂಹಿಕ ಗೋಡೆ ಇರುತ್ತದೆ ಎಂದರೆ ಸರಿ.

41. ದಿಃ 30-11-2016 ರಂದು 5 ರಿಂದ 10 ನೇ ಪ್ರತಿವಾದಿಗಳಿಗೆ ತಿಳಿಸದಂತೆ ನಮ್ಮ ಮನೆಗೆ ಸಂಬಂದಿಸಿದಂತೆ ಕಾಮನ್ ಮೆಲ್ಚಾವಣಿಯನ್ನು ನಾನು ತೆಗೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನಮ್ಮ ಮನೆಯ ಮೆಲ್ಚಾವಣಿಯನ್ನು 5 ರಿಂದ 10 ನೇ ಪ್ರತಿವಾದಿಗಳಿಗೆ ತಿಳಿಸದೇ ಮತ್ತು ಸಂಬಂದ ಪಟ್ಟ ಗ್ರಾಮ ಪಂಚಾಯತದಿಂದ ಪೂರ್ವಾನುಮತಿ ಪಡೆಯದೇ ತೆಗೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮನೆ ನಂ 24 ರ ಮೇಲ್ಚಾವಣಿ ಯನ್ನು ತೆಗೆದರೆ 5 ರಿಂದ 10 ಪ್ರತಿವಾದಿಯರ ಮನೆಗೆ

ತೊಂದರೆ ಆಗುತ್ತದೆ ಎಂದು  5 ರಿಂದ 10 ಪ್ರತಿವಾದಿಯರು ಹೇಳಿದರೂ ಸದರಿ ಸದರಿ ಮನೆ ನಂ 24 ರ ಮೇಲ್ಚಾವಣಿ ಯನ್ನು ತೆಗೆದಿರುತ್ತೇನೆ ಎಂದರೆ ಸರಿಯಲ್ಲ.

42. ನಾನು 5 ರಿಂದ 10 ನೇ ಪ್ರತಿವಾದಿಯವರು ಮನೆ ನಂ 24 ರ ಮೆಲ್ಚಾವಣಿಯನ್ನು ತೆಗೆಯ ಬೇಡಿ ಎಂದು ಹೇಳಿದ್ದರಿಂದ ನಾನು ತೆಗೆದಿದ್ದರೂ ಸಹ 5 ರಿಂದ 10 ನೇ ಪ್ರತಿವಾದಿಯವರಿಗೆ ಸಂಬಂದಿಸಿದ ಮನೆ ನಂ 25 ಬಿದ್ದು ಹೋಗಿರುತ್ತದೆ ಎಂದರೆ ಸರಿಯಲ್ಲ. ಆ ಕಾರಣದಿಂದಾಗಿ 5 ರಿಂದ 10 ನೇ ಪ್ರತಿವಾದಿಗೆ ಸುಮಾರು ರೂ10 ಲಕ್ಷಕ್ಕಿಂತ ಹೆಚ್ಚಿನ ಹಾನಿ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಕಾರಣದಿಂದ ಪ್ರತಿವಾದಿಯರಿಗೆ ನಾನು ರೂ.10 ಲಕ್ಷ ರೂ ಪರಿಹಾರವನ್ನು ಪಾವತಿಸಲು ಬಾಧ್ಯಸ್ಥ ನಿರುತ್ತೇನೆ ಎಂದರೆ ಸರಿಯಲ್ಲ.

43. ನಾನು ಪ್ರತ್ಯೇಕವಾಗಿ ನನ್ನ ಮನೆಯನ್ನು ನಿರ್ಮಿಸಿಕೊಂಡು ವಾಸವಿರುತ್ತೇನೆ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**